ದಿನಾಂಕಃ 20-08-2022 ರಂದು ಈ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಹೆಚ್ ಎಸ್ ಜಿ ವಕೀಲರಿಂದಃ ಪ್ರತಿವಾದಿ ಪರವಾಗಿಃ

ನಾನು 10 ನೇ ತರಗತಿಯವರೆಗೆ ಓದಿದ್ದೇನೆ. ನಮ್ಮ ಅಜ್ಜನ ಹೆಸರು ಚಿಕ್ಕಣ್ಣ. ಅವರ ತಂದೆಯ ಹೆಸರು ಗೊತ್ತಿಲ್ಲ. ಚಿಕ್ಕಣ್ಣ ರವರ ಹೆಂಡತಿ ಹೆಸರು ಗೊತ್ತಿಲ್ಲ. ಚಿಕ್ಕಣ್ಣ ರವರಿಗೆ 3 ಜನ ಮಕ್ಕಳು. ಚಿಕ್ಕಣ್ಣ ರವರ ಹೆಸರು ಬೊಮ್ಮಕ್ಕ ಅಂದರೆ ಗೊತ್ತಿಲ್ಲ. ಚಿಕ್ಕಣ್ಣ ರವರಿಗೆ ಎಷ್ಟು ಜನ ಸಹೋದರರು ಎಂದು ಗೊತ್ತಿಲ್ಲ. ಚಿಕ್ಕಣ್ಣ ರವರಿಗೆ 3 ಜನ ಹೆಣ್ಣುಮಕ್ಕಳು. ಅವರ ಹೆಸರು ನಿಂಗಮ್ಮ, ಇನ್ನಿಬ್ಬರ ಹೆಸರು ಗೊತ್ತಿಲ್ಲ. ಚಿಕ್ಕಣ್ಣ ರವರ 3 ಜನ ಗಂಡು ಮಕ್ಕಳ ಹೆಸರು ಗೊತ್ತಿಲ್ಲ. ಚಿಕ್ಕಣ್ಣ ರವರ ಮೊದಲನೇ ಮಗನ ಹೆಸರು ನಂಜಪ್ಪ ಅಂದರೆ ಸರಿ. 2 ನೇ ಮಗನ ಹೆಸರು ಕರಿಯಪ್ಪ ಅಂದರೆ ಸರಿ. 3 ನೇ ಮಗ ನಿಂಗಪ್ಪ ಅಂದರೆ ನಮ್ಮ ತಂದೆ. ಚಿಕ್ಕಣ್ಣ ರವರ 4 ನೇ ಮಗಳು ನಿಂಗಮ್ಮ ಅಂದರೆ ಸರಿ. 5 ನೇ ಮಗಳ ಹೆಸರು ಕೆಂಪಮ್ಮ ಅಂದರೆ ಗೊತ್ತಿಲ್ಲ. ಈ ಬಗ್ಗೆ ನಾನು ತಿಳಿದುಕೊಂಡಿಲ್ಲ. ನಂಜಪ್ಪ ರವರ ಹೆಂಡತಿ ಹೆಸರು ಹನುಮಕ್ಕ. ನಂಜಪ್ಪ ರವರಿಗೆ 3 ಜನ ಮಕ್ಕಳು. ಅವರ ಹೆಸರು ನಿಂಗಮ್ಮ , ಪಾರ್ವತಮ್ಮ ಮತ್ತು ಚೆನ್ನಪ್ಪ . ಚೆನ್ನಪ್ಪ ರವರು ಬದುಕಿಲ್ಲ. ಅವರ ಹೆಂಡತಿ ಹೆಸರು ನೆನಪಿಲ್ಲ. ಚೆನ್ನಪ್ಪನ ಹೆಸರು ಬಂಧಮ್ಮ ಅಂದರೆ ಸರಿ . ಅವರು ಬದುಕಿಲ್ಲ. ಚೆನ್ನಪ್ಪ ಮತ್ತು ಬಂಧಮ್ಮ ರವರಿಗೆ ಒಬ್ಬ ಗಂಡು ಮಗು ಮತ್ತು ಇಬ್ಬರು ಹೆಣ್ಣುಮಕ್ಕಳು. ಅವರ ಹೆಸರು ಉಮೇಶ, ಸಾವಿತ್ರಮ್ಮ , ರತ್ನಮ್ಮ. ಉಮೇಶ ಬದುಕಿರುವ ಬಗ್ಗೆ ಗೊತ್ತಿಲ್ಲ. ರತ್ನಮ್ಮ ರವರನ್ನು ಜಯಸುವರ್ಣಪುರಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ. ಸಾವಿತ್ರಮ್ಮ ಸೀಗೆಬಾಗೆಯಲ್ಲಿ ಇದ್ದಾರೆ. ಅವರಿಗೆ ಮದುವೆ ಆಗಿಲ್ಲ. ಪಾರ್ವತಮ್ಮ ನ ಗಂಡನ ಹೆಸರು ಶಂಕರಪ್ಪ ಅವರು ಭಟ್ಟರಹಳ್ಳಿಯಲ್ಲಿ ಇದ್ದಾರೆ. ಪಾರ್ವತಮ್ಮ ಮತ್ತು ಶಂಕರಪ್ಪ ಜೀವಂತ ಇಲ್ಲ. ಪಾರ್ವತಮ್ಮ ರವರ ಮಗನ ಹೆಸರು ಕಾಂತರಾಜು. ಪಾರ್ವತಮ್ಮನ ಮಕ್ಕಳ ಹೆಸರು ಓಂಕಾರಮ್ಮ , ಯಶೋದಮ್ಮ ಮತ್ತು ಅಂಬಿಕಮ್ಮ. ಓಂಕಾರಮ್ಮ ರವರು ನಮ್ಮ ಅತ್ತಿಗೆ. ಯಶೋದಮ್ಮ ರವರನ್ನು ಹೊಡೆರಹಳ್ಳಿಗೆ ಕೊಟ್ಟು ಮದುವೆ ಮಾಡಿದ್ದಾರೆ.

ಮುಂದುವರಿದ ಪಾಟೀಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕನಾಯಕನಹಳ್ಳಿ.